# ಲಲನೆಯರ ಮನಗೆದ್ದ ಲಾಂಗ್ ಸ್ಕರ್ಟ್



**ರೆಟ್ರೊ ಫ್ಯಾಷನ್ ಎನಿಸಿಕೊಂಡಿದ್ದ ಉದ್ದದ ಲಂಗಗಳು ಈಗ ಮತ್ತೆ ಟ್ರೆಂಡ್ ಆಗುತ್ತಿವೆ. ಮ್ಯಾಕ್ಸಿ ಸ್ಕರ್ಟ್, ಲಾಂಗ್ ಸ್ಕರ್ಟ್, ಫ್ಲೋರ್ ಲೆಂತ್ ಸ್ಕರ್ಟ್ ಹೀಗೆ ನಾನಾ ರೂಪಗಳಲ್ಲಿ ಫ್ಯಾಷನ್ ಲೋಕಕ್ಕೆ ರಂಗು ತುಂಬುತ್ತಿವೆ.**

■ ಸುಮಾ ಬಿ.

‘ಈ ಶತಮಾನದ ಮಾದರಿ ಹೆಣ್ಣು... ಸ್ವಾಭಿಮಾನದ ಸಾಹಸಿ ಹೆಣ್ಣು...’ ‘ಶುಭಮಂಗಳ’ ಸಿನಿಮಾದ ಈ ಹಾಡಿನಲ್ಲಿ ಹಿರಿಯ ನಟಿ ಆರತಿ ತಮ್ಮ ವಸ್ತ್ರ ವೈಖರಿಯಿಂದಲೇ ಗಮನ ಸೆಳೆದಿದ್ದರು. ಕತ್ತಿಗೊಂದು ಸ್ಕಾರ್ಫ್, ಬಲೂನ್ ಟಾಪ್‌ಗೆ ಉದ್ದದ ಲಂಗ ತೊಟ್ಟ ಅವರ ಪರಿ ಹೊಸ ಟ್ರೆಂಡ್ ಅನ್ನೇ ಹುಟ್ಟುಹಾಕಿತ್ತು. ಆಗಿನ ಮಹಿಳೆಯರ ಚಿತ್ತ ಸೆಳೆದಿದ್ದ ಆ ಶೈಲಿ ಇದೀಗ ಮತ್ತೆ ಫ್ಯಾಷನ್ ಲೋಕಕ್ಕೆ ಹೆಜ್ಜೆ ಇಟ್ಟಿದೆ.

ಕಾಲಕ್ಕೆ ತಕ್ಕಂತೆ ‘ಲಾಂಗ್ ಸ್ಕರ್ಟ್’ ಹೊಸ ರೂಪ ಪಡೆದುಕೊಂಡು ಎಲ್ಲ ಬಗೆಯ ಮೇಲುಡುಗೆಗಳಿಗೂ ಹೊಂದಿಕೊಳ್ಳುತ್ತ ಎಲ್ಲ ವಿನ್ಯಾಸಗಳಲ್ಲೂ ಛಾಪು ಮೂಡಿಸಿದೆ.

ಹೌದು. ‘ಮ್ಯಾಕ್ಸಿ ಸ್ಕರ್ಟ್’, ‘ಲಾಂಗ್ ಸ್ಕರ್ಟ್’, ‘ಫ್ಲೋರ್ ಲೆಂತ್ ಸ್ಕರ್ಟ್’ ಎಂದು ಕರೆಸಿಕೊಳ್ಳುವ ಈ ವಸ್ತ್ರ ಫ್ಯಾಷನ್‌ಪ್ರಿಯ ಯುವತಿಯರ ಮೆಚ್ಚಿನ ಆಯ್ಕೆ ಎನಿಸಿಬಿಟ್ಟಿದೆ. ದಿನನಿತ್ಯದ ಓಡಾಟಗಳಿಗೆ, ಮದುವೆ ಸಮಾರಂಭಗಳಿಗೆ, ಸಣ್ಣ ಪುಟ್ಟ ಪಾರ್ಟಿಗಳಿಗೆ, ಕಚೇರಿ ಕಾರ್ಯಕ್ರಮಗಳಿಗೆ ಉದ್ದದ ಸ್ಕರ್ಟ್‌ಗಳು ಟ್ರೆಂಡಿ ಲುಕ್ ನೀಡುತ್ತಿವೆ. ಪಾಶ್ಚಾತ್ಯ ವಿನ್ಯಾಸ ಮಾತ್ರವಲ್ಲದೇ, ಹಬ್ಬ, ಮದುವೆಯಂಥ ಕಾರ್ಯಕ್ರಮಗಳಿಗೆ ಸಾಂಪ್ರದಾಯಿಕ ಲುಕ್ ನೀಡುವಲ್ಲಿಯೂ ಮ್ಯಾಕ್ಸಿ ಸ್ಕರ್ಟ್ ಸೈ ಎನಿಸಿಕೊಂಡಿದೆ.

ವಯಸ್ಸಿನ ಅಂತರವಿರದೆ ಚಿಕ್ಕಮಕ್ಕಳಿಂದ ಹಿಡಿದು ದೊಡ್ಡವರಾದಿಯಾಗಿ ಎಲ್ಲರೂ ಇಷ್ಟಪಟ್ಟು ಆಯ್ದುಕೊಳ್ಳುವ ಉಡುಪು ಮ್ಯಾಕ್ಸಿ ಸ್ಕರ್ಟ್. ಇದೇ ಕಾರಣಕ್ಕೆ ಬಹುತೇಕ ಮಹಿಳೆಯರ ವಾರ್ಡ್‌ರೋಬ್‌ಗಳಲ್ಲಿ ಜಾಗ ಗಿಟ್ಟಿಸಿಕೊಂಡಿವೆ. ವಯೋಮಾನ ಮಾತ್ರವಲ್ಲ, ಎಲ್ಲಾ ಕಾಲಕ್ಕೂ ಈ ಉಡುಪು ಒಗ್ಗುತ್ತದೆ. ಬೇಸಿಗೆಯಿರಲಿ, ಚಳಿಗಿರಲಿ, ಮೈತುಂಬುವ ಈ ಸ್ಕರ್ಟ್‌ಗಳು ಯಾರಿಗೆ ಮೆಚ್ಚುಗೆಯಾಗದಿರಲು ಸಾಧ್ಯ?

ಈ ಲಾಂಗ್ ಸ್ಕರ್ಟ್ ಟ್ರೆಂಡ್ ಬಗ್ಗೆ ಬೆಂಗಳೂರಿನ ವಸ್ತ್ರವಿನ್ಯಾಸಕಿ ಬೃಂದಾ ಗೌಡ ಹೇಳುವುದು ಹೀಗೆ.

‘ಯುವತಿಯರು ಇಷ್ಟಪಡುವಂತಹ ವೈವಿಧ್ಯಮಯ ಮ್ಯಾಕ್ಸಿಗಳು ಫ್ಯಾಷನ್ ಮಾರುಕಟ್ಟೆಯಲ್ಲಿ ಕೈಬೀಸಿ ಕರೆಯುತ್ತಿವೆ. ಆದರೆ ಯಾವ ಮೇಲುಡುಗೆಗೆ ಯಾವ ಸ್ಕರ್ಟ್ ಸೂಕ್ತ ಎಂದು ತಿಳಿದುಕೊಂಡು ನಮ್ಮ ಅಭಿರುಚಿಗೆ ತಕ್ಕಂತೆ ಮ್ಯಾಚ್ ಮಾಡಿಕೊಳ್ಳಬೇಕು. ಬಹುತೇಕ ಯುವತಿಯರಿಗೆ ಲಾಂಗ್ ಸ್ಕರ್ಟ್ ಅಚ್ಚುಮೆಚ್ಚು. ಆದರೆ ಅದನ್ನು ಹೇಗೆ ಮ್ಯಾಚ್ ಮಾಡಿಕೊಳ್ಳಬೇಕು, ಯಾವ ಟಾಪ್‌ನೊಂದಿಗೆ ಧರಿಸಿದರೆ ಟ್ರೆಂಡಿ ಲುಕ್ ನೀಡುತ್ತದೆ ಎನ್ನುವ ಬಗ್ಗೆ ಗೊಂದಲದಿಂದ ಇರುತ್ತಾರೆ. ಮ್ಯಾಕ್ಸಿ ಎಲ್ಲ ಬಗೆಯ ಟಾಪ್‌ಗಳಿಗೂ ಹೊಂದುತ್ತದೆ. ಆದರೂ ಬಣ್ಣದ ಆಯ್ಕೆಯಲ್ಲಿ ಜಾಣ್ಮೆ ಇರಬೇಕು’.

ಮಿಕ್ಸ್ ಅಂಡ್ ಮ್ಯಾಚ್, ವಿರುದ್ಧ ಬಣ್ಣದ ಟಾಪ್ (ಕಾಂಟ್ರಾಸ್ಟ್), ಸ್ಲೀವ್ ಲೆಸ್ ಟಾಪ್ ಈಗ ಹೆಚ್ಚು ಯುವತಿಯರ ಆಯ್ಕೆಯಾಗಿದೆ. ಇದರೊಂದಿಗೆ ಟ್ಯೂಲೆ ಮ್ಯಾಕ್ಸಿ ಸ್ಕರ್ಟ್, ಕಾಲಮ್ ಸ್ಕರ್ಟ್, ಪ್ಯಾಟರ್ನ್ಡ್ ಸ್ಕರ್ಟ್, ಪ್ಲೀಟೆಡ್ ಸ್ಕರ್ಟ್, ಶೀರ್ ಸ್ಕರ್ಟ್, ಸ್ಟ್ರಿಪ್ಡ್ ಸ್ಕರ್ಟ್... ಹೀಗೆ ನೂರಾರು ವಿನ್ಯಾಸದ ಸ್ಕರ್ಟ್‌ಗಳು ಫ್ಯಾಷನ್ ಮೋಹಕ್ಕೆ ಸಾಕ್ಷಿಯಂತಿವೆ.

### ಹೀಗೆ ಮ್ಯಾಚ್ ಮಾಡಿ

ಕ್ರಾಪ್ ಟಾಪ್ ಜೊತೆಗೆ ಲಾಂಗ್ ಸ್ಕರ್ಟ್ ಧರಿಸುವುದು ಈಗಿನ ಯುವತಿಯರ ಹಾಟ್ ಫೇವರೆಟ್. ಪುಟ್ಟ ಹೆಣ್ಣುಮಕ್ಕಳಿಗೆ, ಯುವತಿಯರಿಗೆ ಭಾರೀ ಚೆಂದ. ಲಂಗದ ಬಣ್ಣಕ್ಕೆ



> ಲಾಂಗ್ ಸ್ಕರ್ಟ್‌ಗಳು ಈಗ ಮತ್ತೆ ಬೇರೆ ಬೇರೆ ರೂಪಗಳಲ್ಲಿ ಕಾಣಿಸಿಕೊಳ್ಳುತ್ತಿವೆ. ಅಭಿರುಚಿಗೆ ತಕ್ಕಂತೆ ಆಯ್ಕೆಗಳೂ ಸಿಗುತ್ತಿವೆ.
>
> -ಬೃಂದಾ ಗೌಡ, ವಸ್ತ್ರ ವಿನ್ಯಾಸಕಿ